ತೋಯಿಸಿ ಹಿಂದಕ್ಕೆ ಮರಳುವ ಅಲೆಗಳ ಸ್ಪರ್ಶ ಅಮ್ಮನ ಸಾಂತ್ವನವಾಗಿತ್ತು. ಬೆಟ್ಟದಂತೆ ಎದ್ದೆದ್ದು ತೂಗುವ ದ್ರವರಾಶಿ ತಾಯಿ ತೂಗುವ ತೊಟ್ಟಿಲಾಗಿತ್ತು.

ಅದೇ ಹಳೆಯ ಮುರುಕು ದೋಣಿ. ಒಂದು ಕಾಲಕ್ಕೆ ಕಡಲೆಲ್ಲ ಸುತ್ತಿ ಮೆರೆದು ನೂರಾರು ಮೀನು ಹಿಡಿದು ಧಿಮಾಕು ತೋರಿತ್ತು. ಈಗ ಮೈಯೆಲ್ಲಾ ತೂತಾಗಿ, ಒಡಕಾಗಿ ಬಿದ್ದಿತ್ತು. ದೇವರಾಜ ಉಷೆಯನ್ನು ಚುಂಬಿಸಿದ್ದು ಇಲ್ಲಿಯೇ. ಆಗ ಮುಸ್ಸಂಜೆ, ಈಗ ಕಡು ರಾತ್ರಿ. ಆಗ ಕಡಲೆಲ್ಲಾ ಕೆಂಪಾಗಿತ್ತು, ಈಗ ಕಪ್ಪು. ದೋಣಿಯ ತುದಿಯಲ್ಲಿ ಕುಳಿತ. ನಿರ್ಜನವಾದ ಪರಿಸರದಲ್ಲಿ ಒಂದೇ ಒಂದು ಜೀವತಂತು. ಒಮ್ಮೆ ಇರುವ ಶಕ್ತಿ ಎಲ್ಲವನ್ನೂ ಸಂಗ್ರಹಿಸಿ "ಉಷಾ..." ಎಂದು ಕೂಗಿದ. ಕಡಲು ನಕ್ಕಿತು. ಗಾಳಿ ಕೇಕೆ ಹಾಕಿತು.

ಕಡಲು ಕೇಳಿತು :

"ಅಯ್ಯೋ ಹುಚ್ಚು ಹುಡುಗ, ನನ್ನ ಬಳಿ ಏನನ್ನು ಹುಡುಕಿ ಬಂದೆ? ನನ್ನ ಬಳಿ ನಿನ್ನ ಉಷಾ ಇಲ್ಲ. ನಾನು ಯಾರಿಗೂ ಏನನ್ನೂ ಕೊಡಲಾರೆ. ಸಾವಿರಾರು ವರ್ಷಗಳಿಂದ ನಾನಿಲ್ಲಿ ಸುಮ್ಮನೆ ಮಲಗಿದ್ದೇನೆ. ನೀವು ಮನುಷ್ಯರು. ನನ್ನಲ್ಲಿ ಏನನ್ನೋ ಹುಡುಕಿ ಬರುತ್ತೀರಿ. ಏನನ್ನೋ ಕಂಡುಕೊಳ್ಳುತ್ತೀರಿ. ಆದರೆ ನನ್ನ ಬಳಿ ಏನೂ ಇಲ್ಲ. ಅಂದು ನೀನು ಚುಂಬಿಸಿದ್ದು ನನಗೆ ಗೊತ್ತು. ಅದೆಷ್ಟೋ ಜನಗಳ ಪ್ರೇಮ ಕಾಮಗಳು ನನ್ನ ಸೆರಗಿನಂಚಿನಲ್ಲಿ ನಡೆಯುತ್ತಿರುತ್ತವೆ. ಅದೆಷ್ಟೋ ಮಂದಿ ನನ್ನೊಳಗೆ ಧುಮುಕಿ ಜೀವ ಕಳೆದುಕೊಳ್ಳುತ್ತಾರೆ. ನಾನು ಏನು ಮಾಡಲಿ? ನಿಮ್ಮೆಲ್ಲ ಭಾವನೆಗಳನ್ನು ನನಗೇಕೆ ಆರೋಪಿಸುತ್ತೀರಿ? ನಿಮ್ಮನ್ನು ಪ್ರೀತಿಸಲು ನಾನು ಅನುಮತಿ ಕೊಟ್ಟೆನೆ? ನಿಮ್ಮ ಹುಡುಗಾಟಕ್ಕೆ ನನ್ನನ್ನೇಕೆ ಪ್ರೇಕ್ಷಕನಾಗು ಅನ್ನುತ್ತಿ? ನನ್ನಂಥ ಭೀಕರ ಸ್ವರೂಪನಲ್ಲಿ ತಾಯ್ತನ ಹುಡುಕುತ್ತಿಯಲ್ಲ? ಹೋಗು ಹೊರಟು ಹೋಗು. ಒಮ್ಮೆ ನಾನು ಮೈಕೊಡವಿ ಆಕಳಿಸಿದರೆ ಪರ್ವತದಂಥ ದೊಡ್ಡ ಅಲೆ ಬಂದು ನಿನ್ನನ್ನು ನನ್ನ ಗರ್ಭಕ್ಕೆ ಹೊತ್ತು ತರುತ್ತದೆ. ನನ್ನ ಗರ್ಭದಲ್ಲಿ ನೂರಾರು ತಿಮಿಂಗಲಗಳಿವೆ. ಹುಡುಗ, ಓಡಿಹೋಗು. ಸಮುದ್ರಗಳೇ ಇಲ್ಲದ ಬಯಲುಸೀಮೆಗೆ ಓಡು, ಅಲ್ಲಿ ಬಿಸಿಲಿದ್ದರೂ ಬಯಲಿದೆ. ಕಣ್ಣು ದಣಿಯುವವರೆಗೆ ಜಗತ್ತನ್ನು ನೋಡಿ ಅರ್ಥಮಾಡಿಕೊಳ್ಳಬಹುದು..."

ಕಡಲಿನ ಮಾತು ದೇವರಾಜನಿಗೆ ಕೇಳಿಸಿತೋ ಇಲ್ಲವೊ. ಅದನ್ನು ಜೋಗುಳವೆಂದು ಭ್ರಮಿಸಿ ಹುಡುಗ ಮಲಗಿಬಿಟ್ಟ. ಮಳೆ 'ಧೋ' ಎಂದು ಸುರಿಯುತ್ತಲೇ ಇತ್ತು. ಆಗಾಗ 'ಉಷಾ' 'ಉಷಾ' ಎಂದು ಉಸುರುತ್ತಿದ್ದ. ಜ್ವರ ಕಾಣಿಸಿಕೊಂಡಿತು. ಕ್ರಮೇಣ ನರಳುವುದು ನಿಂತಿತು.

ಇಡೀ ರಾತ್ರಿ ದೇವರಾಜ ಅಲ್ಲಿಯೇ ಇದ್ದ. ಸೂರ್ಯನಿರಲಿಲ್ಲ. ಚಂದ್ರ ಬರಲಿಲ್ಲ. ತಾರೆಗಳು ದೀರ್ಘ ರಜೆ ಪಡೆದು ಕತ್ತಲ ಗುಹೆ ಸೇರಿದ್ದವು. ಕಡಲೊಮ್ಮೆ ಆಕಳಿಸಿತು. ನಿತ್ರಾಣವಾಗಿ ಮಲಗಿದ್ದ ದೇವರಾಜ ದೊಡ್ಡ ಅಲೆಯ ಸಂಗಡ ಸಮುದ್ರ ಗರ್ಭ ಸೇರಿಕೊಂಡ.

ಕಾರವಾರದ ಕಡಲ ತೀರ ತುಂಬಾ ಉದ್ದವಾಗಿದೆ. ವಿಶಾಲವಾದ ಮರಳು ರಾಶಿಯ ಮೇಲೆ ಉಷಾ ತನ್ನ ಪುಟ್ಟಪಾದಗಳನ್ನಿರಿಸಿ ದಂಡೆಯಲ್ಲಿ ಏನನ್ನೋ ಹುಡುಕುತ್ತಿರುತ್ತಾಳೆ. ಎಷ್ಟೋ ಸಂಜೆಗಳು, ಹಗಲುಗಳು ಅವಳ ಹುಡುಕುವಿಕೆಯಲ್ಲಿ ಸವೆದಿವೆ. ದೇವರಾಜ – ನನ್ನ ದೇವು – ಹಿಂತಿರುಗಿ ಬರುತ್ತಾನೆಂದು ಅವಳ ಬಲವಾದ ನಂಬಿಕೆ. ಕಡಲು ತನ್ನ ಮೌನ ತೊರೆದು ಉಷೆಗೆ ಬುದ್ಧಿ ಹೇಳಿ ಕಳುಹಿಸಿಯೇ ಇಲ್ಲ. ಮಲೆನಾಡಿನ ಹುಡುಗಿ, ಬಯಲುಸೀಮೆಯ ಹುಡುಗನಿಗಾಗಿ ಹುಡುಕುತ್ತಲೇ ಇದ್ದಾಳೆ ; ನನ್ನ ಪ್ರೀತಿಯ ದೇವು, ಬೇಗ ಬಂದುಬಿಡು ಎಂದು.